# ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ: 02–09–2015ರ ನಡವಳಿಗಳು

## ವಿಷಯದ ಸಂಖ್ಯೆ : 178 / 2015–16

ವಿಷಯ: **Remodeling of SWD RN-223 from Ch:575m to 620m at Subramanyapura main road and construction of U shape drain from Ch:280m to 310m in Uttarahalli Ward No.184 in Bommanahalli zone**

**ಪ್ರಸ್ತಾವನೆ:**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮೇಲ್ಕಂಡ ಕಾಮಗಾರಿಗೆ ರೂ.95.00 ಲಕ್ಷಗಳಿಗೆ ಅಂದಾಜನ್ನು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯಲಾಗಿರುತ್ತದೆ. ಅದರಂತೆ, ಮುಖ್ಯ ಅಭಿಯಂತರರು (ಬೃಹತ್ ಮಳೆ ನೀರು ಗಾಲುವೆ) ರವರು ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿಯನ್ನು ದಿನಾಂಕ:21–10–2014 ರಂದು ನೀಡಿರುತ್ತಾರೆ.

ಈ ಕಾಮಗಾರಿಗೆ ಟೆಂಡರ್ ನೋಟಿಫಿಕೇಶನ್ ನಂ. EE/SWD/BH-Z/TEND/05/2014-15 ದಿನಾಂಕ: 21–10–2014 ರಂದು ತಾಂತ್ರಿಕ ಮತ್ತು ಆರ್ಥಿಕ ಬಿಡ್ (Double cover) ಟೆಂಡರ್ ಆಹ್ವಾನಿಸಲಾಗಿತ್ತು.

ಸದರಿ ಟೆಂಡರ್‌ನ ತಾಂತ್ರಿಕ ಬಿಡ್‌ನ್ನು ದಿನಾಂಕ:10–11–2014 ರಮದು ತೆರೆಯಲಾಗಿದೆ. 1. ಶ್ರೀ. ಜಿ.ಚಂದ್ರಶೇಖರ್ 2. ಶ್ರೀ. ಟಿ.ಟಿ.ವೆಂಕಟರಮಣರೆಡ್ಡಿ ಎಂಬ ಇಬ್ಬರು ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಿರುತ್ತಾರೆ ಹಾಗೂ ಇಬ್ಬರು ಗುತ್ತಿಗೆದಾರರ ತಾಂತ್ರಿಕವಾಗಿ ಅರ್ಹತೆಯನ್ನು ಹೊಂದಿರುತ್ತಾರೆ. ಗುತ್ತಿಗೆದಾರರ ತಾಂತ್ರಿಕ ಬಿಡ್‌ಗೆ ದಿನಾಂಕ:13–11–2014 ರಂದು ಮುಖ್ಯ ಅಭಿಯಂತರರು (ಬೃಹತ್ ಮಳೆ ನೀರು ಗಾಲುವೆ) ರವರು ಅನುಮೋದನೆ ನೀಡಿರುತ್ತಾರೆ. ಗುತ್ತಿಗೆದಾರರ ತಾಂತ್ರಿಕ ಬಡ್ ಅನುಮೋದನೆಯಾದ ನಂತರ ದಿನಾಂಕ:13–11–2015 ರಂದು ಆರ್ಥಿಕ ಬಿಡ್ ಅನ್ನು ತೆರೆಯಲಾಗಿದ್ದು, ವಿವರಗಳು ಕೆಳಕಂಡಂತಿವೆ:

| ಕ್ರ. ಸಂ | ಗುತ್ತಿಗೆದಾರರ ಹೆಸರು | ಕಾಮಗಾರಿಯ ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ | ಟೆಂಡರ್‌ಗಿಟ್ಟ ಮೊತ್ತ (ಮಂಜೂರಾದ ಅಂದಾಜುಪಟ್ಟಿಯ ದರದಂತೆ 2014–15ನೇ ಸಾಲಿನ ದರಪಟ್ಟಿಗೆ) ರೂ. | ಗುತ್ತಿಗೆದಾರರು ನಮೂದಿಸಿರುವ ಮೊತ್ತ ರೂ. | 2014–15ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಕ್ಷಿಸಿದಾಗ ಟೆಂಡರ್‌ಗಿಟ್ಟ ಮೊತ್ತದ ಮೇಲಿನ ಶೇಕಡವಾರು ಹೆಚ್ಚಳ/ಕಡಿಮೆ |
|---|---|---|---|---|---|
| 1 | ಶ್ರೀ. ಜಿ.ಚಂದ್ರಶೇಖರ್ | 95,00,000.00 | 92,61,759.90 | 99,91,405.50 | 7.88% ರಷ್ಟು ಹೆಚ್ಚುವರಿ |
| 2 | ಶ್ರೀ. ಟಿ.ಟಿ.ವೆಂಕಟರಮಣರೆಡ್ಡಿ | | | 1,03,58,445.10 | 11.84% ರಷ್ಟು ಹೆಚ್ಚುವರಿ |

ಮೇಲ್ಕಂಡ ವಿವರಗಳನ್ನು ಪರಿಶೀಲಿಸಲಾಗಿ, ಈ ಕಾಮಗಾರಿಗೆ ಅತಿ ಕನಿಷ್ಟ ದರ ನಮೂದಿಸಿರುವ ಎಲ್–1 ಗುತ್ತಿಗೆದಾರರಾದ ಶ್ರೀ. ಜಿ.ಚಂದ್ರಶೇಖರ್ ರವರು ರೂ.99,91,405.50 ಗಳನ್ನು ನಮೂದಿಸಿದ್ದು, ಈ ಮೊತ್ತವು 2014–15ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರೀಕ್ಷಿಸಿದಾಗ ಟೆಂಡರ್‌ಗಿಟ್ಟ ಮೊತ್ತದ ಮೇಲೆ ಶೇ.7.88% ಹೆಚ್ಚು ಇರುತ್ತದೆ.

....................2

ಮೇಲ್ಕಂಡ ಎಲ್ಲಾ ಅಂಶಗಳನ್ನು ತಮ್ಮ ಗಮನಕ್ಕೆ ತರುತ್ತಾ ಪ್ರಸ್ತಾಪಿಸಿರುವ ಕಾಮಗಾರಿಯ ಮೊತ್ತ ರೂ.99,91,405.50 ಗಳಾಗಿದ್ದು 2014-15ನೇ ಸಾಲಿನ ದರಪಟ್ಟಿಗೆ ಹೋಲಿಸಿದಾಗ ಶೇಕಡ 7.88 ರಷ್ಟು ಹೆಚ್ಚಾಗಿ ಇರುವುದರಿಂದ ಕೆಳಕಂಡ ಅಂಶಕ್ಕೆ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:20-07-2015ರ ಟಿಪ್ಪಣಿ.

1. ಗುತ್ತಿಗೆದಾರರಾದ ಶ್ರೀ. ಜಿ.ಚಂದ್ರಶೇಖರ್ ರವರು ನಮೂದಿಸಿರುವ ಟೆಂಡರ್ ಮೊತ್ತ ರೂ.99,91,405.50 ಗಳು ಎಸ್.ಆರ್.ದರ 2014-15ನೇ ಸಾಲಿಗೆ ಶೇ.7.88 ರಷ್ಟು ಹೆಚ್ಚು ದರಗಳಿಗೆ ಟೆಂಡರ್ ಅನುಮೋದನೆ ಕೋರಿದೆ.

**ತೀರ್ಮಾನ: "ಅನುಮೋದಿಸಿದೆ".**

(ಟಿ.ಎಂ.ವಿಜಯಭಾಸ್ಕರ್)
ಆಡಳಿತಗಾರರು

# ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:03–09–2015ರ ನಡವಳಿಗಳು

## ವಿಷಯದ ಸಂಖ್ಯೆ : 180 / 2015–16

ವಿಷಯ: **ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2015–16ನೇ ಸಾಲಿನ ಆಯವ್ಯಯದಲ್ಲಿ ಮೀಸಲಿರಿಸಿದ ವಾರ್ಡ್ ಅನುದಾನ ಮತ್ತು ಕುಡಿಯುವ ನೀರಿನ ಅನುದಾನವನ್ನು ವಾರ್ಡ್‌ನಲ್ಲಿನ ಜನಸಂಖ್ಯೆ ಆಧಾರ ಮತ್ತು ಪ್ರದೇಶದ ವಿಸ್ತೀರ್ಣವಾರು ಮರು ಹಂಚಿಕೆ ಮಾಡುವ ಬಗ್ಗೆ.**

**ಪ್ರಸ್ತಾವನೆ:**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2015–16ನೇ ಸಾಲಿನ ಆಯವ್ಯಯದಲ್ಲಿ ವಾರ್ಡ್ ಅನುದಾನ ಮತ್ತು ಕುಡಿಯುವ ನೀರಿನ ಅನುದಾನವನ್ನು ತಲಾ ಪ್ರತಿ ವಾರ್ಡ್‌ಗೆ ರೂ.10.00 ಲಕ್ಷಗಳಂತೆ ಒಟ್ಟಾರೆ ರೂ.40.00 ಕೋಟಿಗಳನ್ನು ಒದಗಿಸಲಾಗಿದೆ. ಅದರಂತೆ ವಾರ್ಡ್ ಅನುದಾನವನ್ನು ಪ್ರತಿ ವಾರ್ಡ್‌ಗೆ ರೂ.10.00 ಲಕ್ಷಗಳಂತೆ ಒಟ್ಟಾರೆ ರೂ.20.00 ಕೋಟಿಗಳನ್ನು ಆಯವ್ಯಯ ಲೆಕ್ಕ ಶೀರ್ಷಿಕೆ ಪಿ–1771 ರಲ್ಲಿ ಮತ್ತು ಕುಡಿಯುವ ನೀರಿನ ಅನುದಾನವನ್ನು ಪ್ರತಿ ವಾರ್ಡ್‌ಗೆ ರೂ.10.00 ಲಕ್ಷಗಳಂತೆ ಒಟ್ಟಾರೆ ರೂ.20.00 ಕೋಟಿಗಳನ್ನು ಆಯವ್ಯಯ ಲೆಕ್ಕ ಶೀರ್ಷಿಕೆ ಪಿ–1802 ರಲ್ಲಿ ಒದಗಿಸಲಾಗಿದೆ.

ಮಾನ್ಯ ಆಡಳಿತಗಾರರು ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿದಂತೆ ಪ್ರತಿ ವಾರ್ಡ್‌ಗೆ ಒಟ್ಟಾರೆಯಾಗಿ ಒದಗಿಸಿರುವ ಅನುದಾನವನ್ನು ಆಯಾ ವಾರ್ಡ್‌ನಲ್ಲಿನ ಜನಸಂಖ್ಯೆ ಮತ್ತು ಪ್ರದೇಶದ ವಿಸ್ತೀರ್ಣದ ಆಧಾರದ ಮೇಲೆ ಮರು ಹಂಚಿಕೆ ಮಾಡಲು ಸೂಚಿಸಿರುತ್ತಾರೆ.

ಅದರಂತೆ, ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಜನಸಂಖ್ಯೆಯು ಮತ್ತು ವಾರ್ಡ್‌ಗಳ ವಿಸ್ತೀರ್ಣದ ಆಧಾರದ ಮೇರೆಗೆ ಪಾಲಿಕೆ ವ್ಯಾಪ್ತಿಯ 198ರ ವಾರ್ಡ್‌ಗಳಲ್ಲಿನ ಜನಸಂಖ್ಯೆಗೆ ಶೇ.70 ರಷ್ಟು ಮತ್ತು ವಿಸ್ತೀರ್ಣಕ್ಕೆ ಶೇ.30 ರಷ್ಟು ಒತ್ತು ನೀಡಿ ಹಂಚಿಕೆ ಮಾಡಲು ಮೆ॥ ವಲ್ಲಬ್ ಸಾಫ್ಟ್‌ವೇರ್ ಸಲ್ಯೂಶನ್ಸ್ ರವರಿಗೆ ತಿಳಿಸಲಾಗಿತ್ತು. ಅದರಂತೆ, ಮೆ॥ ವಲ್ಲಬ್ ಸಾಫ್ಟ್‌ವೇರ್ ಸಲ್ಯೂಶನ್ಸ್ ರವರು ನೀಡಿರುವ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, 2015–16ನೇ ಸಲಿನ ಆಯವ್ಯಯದಲ್ಲಿ ವಾರ್ಡ್ ಅನುದಾನ ಮತ್ತು ಕುಡಿಯುವ ನೀರಿನ ಅನುದಾನವನ್ನು ತಲಾ ರೂ.20.00 ಕೋಟಿಗಳಂತೆ ಒಟ್ಟಾರೆ ರೂ.40.00 ಕೋಟಿಗಳನ್ನು ಒದಗಿಸಲಾಗಿದ್ದು, ಜನಸಂಖ್ಯೆಗೆ ಶೇ.70 ರಷ್ಟು ಮತ್ತು ವಾರ್ಡ್‌ನ ವಿಸ್ತೀರ್ಣಕ್ಕೆ ಶೇ.30 ರಷ್ಟು ಒತ್ತು ನೀಡಿ ಮರು ಹಂಚಿಕೆ ಮಾಡುವ ಬಗ್ಗೆ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:28–08–2015ರ ಟಿಪ್ಪಣಿ.

**ತೀರ್ಮಾನ: "ಅನುಮೋದಿಸಿದೆ".**

(ಟಿ.ಎಂ.ವಿಜಯಭಾಸ್ಕರ್)
ಆಡಳಿತಗಾರರು